**KARNATAK UNIVERSITY, DHARWAD**
**ACADEMIC (S&T) SECTION**
**ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ**
**ವಿದ್ಯಾಮಂಡಳ (ಎಸ್&ಟಿ) ವಿಭಾಗ**

ಸ್ವಾತಂತ್ರ್ಯದ ಅಮೃತ ಮಹೋತ್ಸವ

Tel: 0836-2215224
e-mail: academic.st@kud.ac.in
Pavate Nagar, Dharwad-580003
ಪಾವಟೆ ನಗರ, ಧಾರವಾಡ – 580003

NAAC Accredited
'A' Grade 2014

website: kud.ac.in

No. KU/Aca(S&T)/SSL-456/ UGCE/2023-24/1556 Date: 2 APR 2024

## ಸುತ್ತೋಲೆ

ವಿಷಯ: 2023–24ನೇ ಸಾಲಿನ ಸ್ನಾತಕ ಪದವಿ ಸಮ ಸೆಮಿಸ್ಟರ್‌ಗೆ ವಿದ್ಯಾರ್ಥಿಗಳಿಗೆ ಪ್ರವೇಶ ನೀಡುವ ಬಗ್ಗೆ ನಿರ್ಲಕ್ಷದ ಅಥವಾ ಮಾಹಿತಿ ನೀಡದ ಕುರಿತು.

ಉಲ್ಲೇಖ: 1. ಕಚೇರಿ ಸುತ್ತೋಲೆ ಸಂ. KU/Aca(S&T)/SSL-436/ UGCE/2023-24/1527, ದಿ: 09.03.2024.
2. ಕಚೇರಿ ಸುತ್ತೋಲೆ ಸಂ. KU/Aca(S&T)/SSL-436/ UGCE/2023-24/1541, ದಿ: 18.03.2024.
3) ಕುಲಪತಿಗಳ — ಅನುಮೋದನೆ ದಿನಾಂಕ — 2/4/24

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಪ್ರಸ್ತುತ 2023–24ನೇ ಶೈಕ್ಷಣಿಕ ಸಾಲಿಗಾಗಿ ಸ್ನಾತಕ ಪದವಿಗಳ ಸಮ ಸೆಮಿಸ್ಟರ್‌ಗಳಿಗೆ (2, 4 ಮತ್ತು 6) ಪ್ರವೇಶ ನೀಡುವ ಬಗ್ಗೆ ಬಹಳಷ್ಟು ಮಹಾವಿದ್ಯಾಲಯಗಳು ವಿದ್ಯಾರ್ಥಿಗಳಿಗೆ ಪ್ರವೇಶದ ಬಗ್ಗೆ ಮಾಹಿತಿ ನೀಡದೇ ಅಥವಾ ವಿದ್ಯಾರ್ಥಿಗಳು ಮಹಾವಿದ್ಯಾಲಯದಲ್ಲಿ ಪ್ರವೇಶಕ್ಕಾಗಿ ಬಂದಿರುವ ಸಂದರ್ಭದಲ್ಲಿ ಮಹಾವಿದ್ಯಾಲಯಗಳ ಆಂತರಿಕ ವಿಷಯ ಅಥವಾ ಶುಲ್ಕವನ್ನು ಕಂತುಗಳ ರೂಪದಲ್ಲಿ ಮಹಾವಿದ್ಯಾಲಯವು ಭರಿಸಲು ನೀಡಿ ಉಳಿದ ಕಂತುಗಳನ್ನು ವಿದ್ಯಾರ್ಥಿಗಳಿಂದ ವಸೂಲು ಮಾಡುವ ಕುರಿತಂತೆ ಸಮ ಸೆಮಿಸ್ಟರ್‌ಗಳಿಗೆ ಪ್ರವೇಶವನ್ನು ನೀಡದೇ ಇರುವುದು ಮಕ್ಕಳ ವಿದ್ಯಾಭ್ಯಾಸವನ್ನು ಮೊಟಕುಗೊಳಿಸುವ ಉದ್ದೇಶವಾಗಿದೆಯೆಂದು ವಿಶ್ವವಿದ್ಯಾಲಯವು ಭಾವಿಸಿದೆ. ಇದು ಮಕ್ಕಳ ಭವಿಷ್ಯಕ್ಕೆ ಮಾರಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ, ವಿದ್ಯಾರ್ಥಿಗಳಿಗೆ ಸರಿಯಾದ ಸಮಯದಲ್ಲಿ ಪ್ರವೇಶದ ಬಗ್ಗೆ ಮಾಹಿತಿ ನೀಡುವುದು ಹಾಗೂ ಮಹಾವಿದ್ಯಾಲಯಗಳು ತಮ್ಮ ಆಂತರಿಕ ಸಂಘರ್ಷದಲ್ಲಿ ವಿದ್ಯಾರ್ಥಿಗಳಿಗೆ ಪ್ರವೇಶ ನಿರಾಕರಿಸದೇ ನಿಗದಿತ ಅವಧಿಯಲ್ಲಿ ಪ್ರವೇಶ ನೀಡಲು ಈ ಮೂಲಕ ಎಲ್ಲ ಕ.ವಿ.ವಿ. ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ ಆದೇಶಿಸಲಾಗಿದೆ.

ಮುಂದುವರೆದು, ಪ್ರವೇಶದ ಅಂತಿಮ ದಿನ ಮುಗಿದ ನಂತರ ವಿದ್ಯಾರ್ಥಿಗಳನ್ನು ಪ್ರಾಚಾರ್ಯರು ವಿಶ್ವವಿದ್ಯಾಲಯದ ಅಧಿಕಾರಿಗಳನ್ನು ಭೆಟ್ಟಿಯಾಗಿ ಪ್ರವೇಶದ ದಿನಾಂಕವನ್ನು ವಿಸ್ತರಿಸಲು ನಿರ್ದೇಶಿಸುವುದನ್ನು ವಿಶ್ವವಿದ್ಯಾಲಯವು ಮಹಾವಿದ್ಯಾಲಯದ ಪ್ರಾಚಾರ್ಯರ ಅಶಿಸ್ತು ಎಂದು ಪರಿಗಣಿಸಿದೆ. ಮಹಾವಿದ್ಯಾಲಯದ ಯಾವುದೇ ವಿಷಯಕ್ಕಾದರೂ ವಿದ್ಯಾರ್ಥಿಗಳನ್ನು ವಿಶ್ವವಿದ್ಯಾಲಯಕ್ಕೆ ಕಳುಹಿಸುವುದು ಕಂಡು ಬಂದಲ್ಲಿ ಸದರ ಮಹಾವಿದ್ಯಾಲಯಗಳ ಸಂಯೋಜನೆ ಮುಂದುವರೆಸುವ ಬಗ್ಗೆ ಮುಂಬರುವ ದಿನಗಳಲ್ಲಿ ಗಂಭೀರವಾಗಿ ಚಿಂತನೆ ಮಾಡಲಾಗುವುದು.

ಆದ್ದರಿಂದ, ಎಲ್ಲ ಮಹಾವಿದ್ಯಾಲಯದ ಪ್ರಾಚಾರ್ಯರು ತಮ್ಮ ಮಹಾವಿದ್ಯಾಲಯದ ವಿದ್ಯಾರ್ಥಿಗಳಿಗೆ ಪ್ರವೇಶ / ಪರೀಕ್ಷಾ ಫಲಿತಾಂಶ / ಅರ್ಹತಾ ಪ್ರಮಾಣ ಪತ್ರ ಮುಂತಾದ ವಿಷಯದಲ್ಲಿ ಏನಾದರೂ ತೊಂದರೆಯಾದಲ್ಲಿ ಮಹಾವಿದ್ಯಾಲಯದ ಪ್ರಾಚಾರ್ಯರು ಅಥವಾ ಮಹಾವಿದ್ಯಾಲಯ ಪ್ರತಿನಿಧಿಗಳು ಪತ್ರದ ಮುಖಾಂತರ ಸಂಬಂಧಪಟ್ಟ ಅಧಿಕಾರಿಗಳನ್ನು ಸಂಪರ್ಕಿಸಲು ಆದೇಶಿಸಲಾಗಿದೆ.

ಪು.ತಿ.ನೋ.

ಮುಂದುವರೆದು, ಉಲ್ಲೇಖಿತ ಪತ್ರಗಳಲ್ಲಿ ನೀಡಲಾದ ಸುತ್ತೋಲೆಗಳನ್ನು ಒಳಗೊಂಡಂತೆ ಎಲ್ಲ ಸ್ನಾತಕ ಪದವಿಗಳ ಸಮ ಸೆಮಿಸ್ಟರ್ (2, 4 ಮತ್ತು 6) ಪ್ರವೇಶಕ್ಕೆ ರೂ. 450/- (ರೂ. 250/- ಪ್ರವೇಶ + ರೂ. 200/- ದಂಡ) ಶುಲ್ಕದೊಂದಿಗೆ ದಿನಾಂಕ: 29.03.2024 ರಿಂದ 06.04.2024ರ ವರೆಗೆ ವಿಸ್ತರಿಸಲಾಗಿದೆ. ಹಾಗೂ ಶುಲ್ಕವನ್ನು SB Collect ಮುಖಾಂತರ ದಿನಾಂಕ: 08.04.2024 ರಂದು ಭರಿಸುವುದು ಹಾಗೂ ಪ್ರವೇಶ ಪಡೆದುಕೊಂಡ ವಿದ್ಯಾರ್ಥಿಗಳ ಯಾದಿಯನ್ನು ನಿಗದಿತ ಅನುಬಂಧದಲ್ಲಿ ಭರ್ತಿ ಮಾಡಿ ಶುಲ್ಕದ ರಶೀದಿಯೊಂದಿಗೆ ದಿನಾಂಕ: 10.04.2024ರ ಒಳಗಾಗಿ ವಿದ್ಯಾಮಂಡಳ (ಎಸ್&ಟಿ) ವಿಭಾಗಕ್ಕೆ ಸಲ್ಲಿಸುವುದು. ಈ ಮೇಲ್ಕಂಡ ಅಂಶಗಳನ್ನು ಪಾಲಿಸದಿದ್ದಲ್ಲಿ ಸಂಬಂಧಿಸಿದ ಮಹಾವಿದ್ಯಾಲಯಗಳ ಪ್ರಾಂಶುಪಾಲರುಗಳ ಮೇಲೆ ವಿಶ್ವವಿದ್ಯಾಲಯವು ಕ್ರಮ ಕೈಗೊಳ್ಳುವುದರ ಜೊತೆಗೆ ಮಹಾವಿದ್ಯಾಲಯದ ಸಂಯೋಜನೆಯನ್ನು ರದ್ದುಪಡಿಸಲಾಗುವುದು.

A Channappa

ಕುಲಸಚಿವರು

ಗೆ,
ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲ ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ. (ಕ.ವಿ.ವಿ. ಅಂರ್ತಜಾಲ ಹಾಗೂ ಮಿಂಚಂಚೆ ಮೂಲಕ ಬಿತ್ತರಿಸಲಾಗುವುದು)

**ಪ್ರತಿ:**

1. ನಿರ್ದೇಶಕರು, ಕಾಲೇಜು ಅಭಿವೃದ್ಧಿ / ವಿದ್ಯಾರ್ಥಿ ಕಲ್ಯಾಣ ವಿಭಾಗ, ಕ.ವಿ.ವಿ. ಧಾರವಾಡ.
2. ನಿರ್ದೇಶಕರು, ಐ.ಟಿ. ಶಾಖೆ, ಪರೀಕ್ಷಾ ವಿಭಾಗ, ಕ.ವಿ.ವಿ. ಧಾರವಾಡ.
3. ನೊಡಲ್ ಅಧಿಕಾರಿಗಳು, UUCMS ಘಟಕ, ಕ.ವಿ.ವಿ. ಧಾರವಾಡ.
4. ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.
5. ಕುಲಸಚಿವರ ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.
6. ಕುಲಸಚಿವರು (ಮೌಲ್ಯಮಾಪನ) ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.
7. ಅಧೀಕ್ಷಕರು, ಪ್ರಶ್ನೆ ಪತ್ರಿಕೆ / ಗೌಪ್ಯ / ಜಿ.ಎ.ಡಿ. / ವಿದ್ಯಾಂಡಳ (ಪಿ.ಜಿ.ಪಿಎಚ್.ಡಿ) ವಿಭಾಗ, ಸಂಬಂಧಿಸಿದ ಕೋರ್ಸುಗಳ ವಿಭಾಗಗಳು ಪರೀಕ್ಷಾ ವಿಭಾಗ, ಕ.ವಿ.ವಿ. ಧಾರವಾಡ.